Starting a Clegree College in Mudhole of Scdom Taluk

18 : (5)

ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ (ಸೇಡಂ)

a) Whether the Government is aware that there is a repuirement of a repuirement of a inew Degree college in Mudhole of Sedam taluk.

b) Is there any proposal before the Government to start a new Degree college in Sedam Assembly segment.

c) If so, what is the action taken by the Government in this behalf?

ಶ್ರೀ ಸಿ.ಟಿ.ರವಿ

(ಮಾನ್ಯ ಉನ್ನತ ಶಿಕ್ಷಣ ಸಚಿವರು)

a) ಹೌದು

b) ಹೌದು

c) ವಿದ್ಯಾರ್ಥಿಗಳ ಸಂಖ್ಯೆ ಜಮೀನಿನ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನು ಪರಿಗಣಿಸಿ ಕ್ರಮವಹಿಸಲಾಗುವುದು.

10ನೇ ತರಗತಿಯಲ್ಲಿ ತೇರ್ಗಡೆಯಾಗುತ್ತಿರುವ ವಿದ್ಯಾರ್ಥಿಗಳು

42 (89)

ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್)

ಅ) ಮಹಾಲಕ್ಷ್ಮೀ ಲೇಔಟ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಬಿ.ಬಿ.ಎಂ.ಪಿ. ವಾರ್ಡ್ ಸಂ.67ರಲ್ಲಿನ ಜಿ.ಡಿ.ನಾಯ್ಡು ಹಾಲ್ ಕಾಂಪೌಂಡಿನಲ್ಲಿ ಪ್ರಥಮ ದರ್ಜೆ ಕಾಲೇಜಿನ ನಿರ್ಮಾಣಕ್ಕಾಗಿ ಬಿ.ಡಿ.ಎ ವತಿಯಿಂದ ನಿವೇಶನ ಮಂಜೂರಾಗಿದ್ದು, ಅದನ್ನು ಇಲಾಖೆ ವಶಕ್ಕೆ ಪಡೆಯಲಾಗಿದೆಯೇ?

ಆ) ಹಾಗಿದ್ದರೆ, ನಿರ್ಮಾಣ ಕಾರ್ಯ ಇನ್ನೂ ಆರಂಭವಾಗದೆ ಇರಲು ಇಲಾಖೆಗೆ ಇರುವ ತೊಡಕುಗಳೇನು?

ಇ) ಬಿ.ಡಿ.ಎ ಗೆ ಇಲಾಖೆ ವತಿಯಿಂದ ನಿವೇಶನಕ್ಕಾಗಿ ಪಾವತಿಸಿರುವ ಮೊತ್ತವೆಷ್ಟು?

ಈ) ಕಟ್ಟಡ ನಿರ್ಮಾಣ ಕಾಮಗಾರಿ ಪೂರೈಸಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ; ಯೋಜನೆಗೆ ಮೀಸಲಿಟ್ಟಿರುವ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಸಿ.ಟಿ.ರವಿ (ಉನ್ನತ ಶಿಕ್ಷಣ ಸಚಿವರು)

ಅ) ರಾಜಾಜಿನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಹಾಲಕ್ಷ್ಮಿ ಲೇಔಟ್ ವಿಧಾನ ಕ್ಷೇತ್ರದ ವ್ಯಾಪ್ತಿಯ ಪಶ್ಚಿಮ ಕಾರ್ಡ್ ರಸ್ತೆಯ ನಿವೇಶನ ಸಂಖ್ಯೆ: 07/ಎ ಯನ್ನು ಬಿ.ಡಿ.ಎ ಹಂಚಿಕೆ ಮಾಡಿರುತ್ತದೆ. ಸದರಿ ನಿವೇಶನವನ್ನು ಇಲಾಖೆಯ ಹೆಸರಿಗೆ ನೋಂದಾಣಿ ಮಾಡಿಕೊಡುವಂತೆ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ದಿ: 23–11–2012 ರಂದು ಪತ್ರ ಬರೆಯಲಾಗಿದೆ. ನೋಂದಾಣಿಯಾದ ಕೂಡಲೇ ನಿವೇಶನವನ್ನು ಇಲಾಖೆಯ ವಶಕ್ಕೆ ಪಡೆಯಲಾಗುವುದು.

ಆ) ನಿವೇಶನ ಇಲಾಖೆಯ ಹೆಸರಿಗೆ ನೋಂದಾಣಿಯಾಗದಿರುವ ಕಾರಣ ನಿರ್ಮಾಣ ಕಾರ್ಯ ಆರಂಭವಾಗಿರುವುದಿಲ್ಲ.

ಇ) ನಿವೇಶಣಕ್ಕಾಗಿ ಇಲಾಖೆಯಿಂದ ರೂ. 77,21,370/– ಗಳನ್ನು ಬಿ.ಡಿ.ಎ.ಗೆ ಪಾವತಿಸಲಾಗಿರುತ್ತದೆ.

ಈ) ಸದರಿ ಕಾಮಗಾರಿಗೆ ರೂ. 200.00ಲಕ್ಷಗಳನ್ನು ಮೀಸಲಿ–ರಿಸಲಾಗಿದೆ. ನಿವೇಶನದ ನೋಂದಾಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಟ್ಟಡ ನಿರ್ಮಾಣ ಕಾಮಗಾರಿಗೆ ಶೀರ್ಘ ಕ್ರಮ ಕೈಗೊಳ್ಳಲಾಗುವುದು.

ಮುಜರಾಯಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನ

27 (80)

ಶ್ರೀಮತಿ ಕಲ್ಪನಾ ಸಿದ್ದರಾಜು (ಮುಜರಾಯಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನ)

ಅ) ಮದ್ದೂರು ತಾಲ್ಲೂಕಿಗೆ ಕಳೆದ ಮೂರು ವರ್ಷಗಳಲ್ಲಿ ಮುಜರಾಯಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನ ಮೊತ್ತವೆಷ್ಟು (ವಿವರ ನೀಡುವುದು)?